ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಪೀಲು ಸ್ಥಾಯಿ ಸಮಿತಿಯ ದಿನಾಂಕ:08-03-2013ರಂದು ನಡೆದ ಸಭೆಯ ನಡವಳಿಗಳು

ಕ್ರಮ ಸಂಖ್ಯೆ	ಸದಸ್ಯರು ಹೆಸರು ಶ್ರೀಯುತರುಗಳಾದ	ಪದನಾಮ	ಹಾಜರಿದ್ದ ಅಧಿಕಾರಿಗಳು
01	ಪುಟ್ಟಮ್ಮ	ಅಧ್ಯಕ್ಷರು	ಅಧಿಕ ಕೌನ್ಸಿಲ್ ಕಾರ್ಯದರ್ಶಿ
02	ಬಿ.ಎಸ್.ಮಂಜುನಾಥ ರೆಡ್ಡಿ	ಸದಸ್ಯರು	ಸಲಹೆಗಾರರು
03	ಹೆಚ್.ಆರ್.ಕೃಷ್ಣಪ್ಪ	ಸದಸ್ಯರು	ಜಂಟಿ ಆಯುಕ್ತರು(ಜಾಹಿರಾತು)
04	ಜಿ.ಹೆಚ್.ರಾಮಚಂದ್ರ	ಸದಸ್ಯರು	ಕಾನೂನು ಆಧಿಕಾರಿ
05	ಎಲ್.ರಮೇಶ್	ಸದಸ್ಯರು	ಸಹಾಯಕ ಕಂದಾಯ ಅಧಿಕಾರಿಗಳು (ದೂಮ್ಮಲೂರು)
06	ಸುಕಂದ	ಸದಸ್ಯರು	ಕಂದಾಯ ಪರಿವೀಕ್ಷಕರು(ಕೆಂಪೇಗೌಡನಗರ) (ರಾ.ರಾ.ನಗರ)
07	ಎಂ.ಮುನಿಸ್ವಾಮಿ	ಸದಸ್ಯರು	ಶ್ರೀ.ಶಾಂತೇಶ್ ವ್ಯವಸ್ಥಾಪಕರು (ದಕ್ಷಿಣ) ಮಾರುಕಟ್ಟೆ
08	ಜಿ.ವರಲಕ್ಷ್ಮಿ	ಸದಸ್ಯರು	
09	ಎನ್.ಜಯಪಾಲ	ಸದಸ್ಯರು	
10	ಲಾವಣ್ಯ ಗಣೇಶ್ ರೆಡ್ಡಿ	ಸದಸ್ಯರು	
11	ಆಶಾ ಸುರೇಶ್	ಸದಸ್ಯರು	

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ವಿಷಯ:ಸಂಖ್ಯೆ:ಅಸ್ಥಾಸ/(ಕ)/20/2012-13: ಶ್ರೀಮತಿ.ಪಿ.ಮೇರಿ ವೇರೋನಿಕಾ ಡಾಟರ್: ಅಫ್.ಅನ್ಸ್‌ತೀಷ್ಟೀಯ ಪಾಲ್ ಸ್ವತ್ತಿನ ಸಂಖ್ಯೆ: 405 ಅಸ್ಟಿನ್ ಟೌನ್ ವಾರ್ಡ್ ನಂ.114 ಬಾಡಿಗೆ ಗುತ್ತಿಗೆ ವರ್ಗಾವಣೆ ಮಾಡವುದಕ್ಕೆ ಸಂಬಂಧಿಸಿದಂತೆ ಸಹ ಕಂದಾಯಾಧಿಕಾರಿ (ದೂಮ್ಮಲೂರು) ವಲಯ ಇವರು ನೀಡಿರುವ ಅಂತಿಮ ಹಿಂಬರಹ ದಿನಾಂಕ: 23-6-2011ರ ವಿರುದ್ಧ ಮೇಲ್ಮನವಿ ಕುರಿತು.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಜರಿದ್ದು ಮತ್ತು ಲಿಖಿತವಾದ ಹಾಜರು ಪಡಿಸಿದ್ದು ಹಾಗೂ ಪ್ರತಿವಾದಿ ಶ್ರೀ, ರಂಗನಾಥ ಪ್ರ,ದ,ಗು ಇವರು ಹಾಜರಿದ್ದು ಸಂಬಂಧಪಟ್ಟ ಸಹ ಕಂದಾಯಾಧಿಕಾರಿ (ದೂಮ್ಮಲೂರು) ರಜೆಯ ಮೇಲೆ ಇರುವುದರಿಂದ ಕಾಲಾವಕಾಶ ಕೋರಿದ್ದು ಅಂತಿಮವಾಗಿ ಪ್ರಕರಣವನ್ನು ಮುಂದೂಡಿದೆ.

ವಿಷಯ:ಸಂಖ್ಯೆ:ಅಸ್ಥಾಸ/(ತೆ)/26/2012-13 ಅಪರ ಆಯುಕ್ತರು (ರಾಜರಾಜೇಶ್ವರಿನಗರ) ರವರ ಟಿಪ್ಪಣಿ ದಿನಾಂಕ:22-1-2013ರ ರೀತ್ಯಾ ಆಸ್ತಿ ಸಂಖ್ಯೆ:694ಎ/65,ಹಚ್.ಎಂ.ಟಿ.ಮುಖ್ಯರಸ್ತೆ ಗೋಕುಲ 1ನೇ ಹಂತ 1ನೇ ಮುಖ್ಯ ವಾರ್ಡ್-17ರ ಸ್ವತ್ತಿನ ಖಾತೆಯ ಈ ಕಛೇರಿ ದಾಖಲೆಗಳಲ್ಲಿ ಶ್ರೀ.ಎ.ರಾಮಕೃಷ್ಣಯ್ಯ ರವರ ಹೆಸರಿನಲ್ಲಿದ್ದು, ಸದರಿ ಸ್ವತ್ತಿನ ಅಳತೆ 2000 ಚದರಡಿಗಳಿದ್ದಯ, ಖಾತೇದಾರರು ದಿನಾಂಕ:01-04-2008 ರಿಂದ ಜಾರಿಗೆ ಬರುವಂತೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆ ಅಡಿಯಲ್ಲಿ 1992-93ನೇ ಸಾಲಿನಲ್ಲಿ 5800 ಅಡಿಗಳ ಕಟ್ಟಡ ನಿರ್ಮಿಸಿರುವುದಾಗಿಯೂ ಅದರ ಪೈಕಿ 1500 ಚದರಡಿಗಳಿಗೆ ರೂ.1.80 ಪೈಸೆಯಂತೆ ಸ್ವಂತ ವಾಸಕ್ಕೆ 2100 ಅಡಿಗಳನ್ನು ಸೇವಾ ಪ್ರದೇಶ ಎಂದು ಪರಿಗಣಿಸಿಕೊಂಡು ರೂ.3/- ನಂತೆ ಶೇಕಡ 50% ರಷ್ಟು ದರ ನಿಗಧಿ ಪಡಿಸಿ ಶೇ.25% ರಷ್ಟು ಪ್ರದೇಶ ಅಂದರೆ 700 ಚದರಡಿಗಳೆಂದು ಹಾಗೂ ಉಳಿಕೆ 1500 ಚ.ಅ.ಗಳನ್ನು ವಾಹನ ಪ್ರದೇಶ ವಾಡಿಗೆಗೆ ಘೋಷಿಸಿಕೊಂಡಿರುತ್ತಾರೆ. ಎಲ್ಲಾ ಸ್ವತ್ತುಗಳಿಗೆ ಶೇ.18% ರಂತೆ ಸವಕಳಿ ನೀಡಿಕೊಂಡಿರುತ್ತಾರೆ ಈ ಸ್ವತ್ತಿನಲ್ಲಿ 4 ಮಹಡಿಗಳನ್ನು ಘೋಷಿಸಿಕೊಂಡಿದ್ದು ಮಂಜೂರಾತಿ ನಕ್ಷೆ ಹಾಜರುಪಡಿಸಿರುವುದಿಲ್ಲ.

ಸದರಿ ಸ್ವತ್ತಿನ ಮಾಲೀಕರು ತಪ್ಪು ಮಾಹಿತಿ ನೀಡಿ ಕಂದಾಯ ಪಾವತಿಸುತ್ತಿರುವುದು ಕಂಡು ಬಂದಿರುವುದರಿಂದ ಕಟ್ಟಡದಲ್ಲಿ ತಳ ಅಂತಸ್ತು 1500 ಚದರಡಿ,ನೆಲ ಅಂತಸ್ತು 1500 ಚದರಡಿ, 1ನೇ ಅಂತಸ್ತು

ಮತ್ತು 2ನೇ ಅಂತಸ್ತುಗಳು ಒಟ್ಟು 2800 ಚದರಡಿ(ಮುತ್ತೋಟ್ ಫೈನಾನ್ಸ್) ಒಟ್ಟು 5800 ಚದರಡಿಗಳ ಪೂರ್ಣ ಕಟ್ಟಡದ ಉಪಯೋಗ ಬಾಡಿಗೆ ಆಧಾರ ಒಟ್ಟು ವಾರ್ಷಿಕ ಮೌಲ್ಯ ರೂ.3,80,480/- (ವಸತಿಯೇತರ)ಗಳಿಗೆ ದಿನಾಂಕ:01-04-2008ರಿಂದ ಬಾಡಿಗೆ ಬರುವಂತೆ ಕಂದಾಯ ನಿಗಧಿಪಡಿಸಿ ಈ ವಲಯ ಕಛೇರಿ ವಾರ್ಡ್-17ರ ಎಂ.ಟಿ.ಆರ್.10/11-12 ರಂತೆ ವಿಶೇಷ ಸೂಚನಾ ಪತ್ರವನ್ನು ದಿನಾಂಕ: 11-08-2011 ರಂದು ಸ್ವತ್ತಿನ ಮಾಲೀಕರಿಗೆ ಜಾರಿಗೊಳಿಸಿದೆ.

ದಿನಾಂಕ:11-08-2011 ರಂದು ಈ ಕಛೇರಿಯಿಂದ ನೀಡಿರುವ ವಿಶೇಷ ಸೂಚನಾ ಪತ್ರದಲ್ಲಿ ನಿಗಧಿಪಡಿಸಿರುವ ಕಂದಾಯದ ವಿರುದ್ಧ ಪ್ರಥಮ ಅಪೀಲು ಅಧಿಕಾರಿ ಕಂದಾಯ ಅಧಿಕಾರಿ (ರಾಜರಾಜೇಶ್ವರಿನಗರ)ವಲಯ ರವರಿಗೆ ಅಪೀಲು ಮನವಿ ಸಲ್ಲಿಸಿದ್ದ ಮೇರೆಗೆ ಅಪೀಲು ಹೇಳಿಕೆ ಪ್ರಕಾರ 5800 ಚದರಡಿ ಕಟ್ಟಡಕ್ಕೆ ರೂ.13,776/-(ವಸತಿ),2,88,640/-(ವಸತಿಯೇತರ) ಗಳಿಗೆ ದಿನಾಂಕ;01-04-2008ರಿಂದ ಕಂದಾಯವನ್ನು ಮರು ನಿಗಧಿಪಡಿಸಿ ಈ ವಲಯ ಕಛೇರಿ ವಿಶೇಷ ಸೂಚನಾ ಪತ್ರದ ಸಂಖ್ಯೆ: ಎಂ.ಟಿ.ಆರ್.28/11-12 ರಂತೆ ಕಂದಾಯವನ್ನು ಮರು ನಿಗಧಿಪಡಿಸಿದೆ.

ಮೇಲ್ಕಂಡಂತೆ ಕಂದಾಯ ನಿಗಧಿಪಡಿಸಿರುವುದರ ವಿರುದ್ಧ ಖಾತೇದಾರರು ಅಧ್ಯಕ್ಷರು, ಅಪೀಲು ಸ್ಥಾಯಿ ಸಮಿತಿ ರವರಿಗೆ ಅರ್ಜಿ ಸಲ್ಲಿಸಿದ್ದು **ಅಪೀಲು ಅರ್ಜಿಯ ಕಾಲಮಿತಿಯಲ್ಲಿರುವುದಿಲ್ಲ** ಪೂರ್ಣ ಕಡತವನ್ನು ಸಮಿತಿಯ ತೀರ್ಮಾನ ಕೋರಿ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಜರಿದ್ದು ಶ್ರೀ.ಹೆಚ್.ಕೃಷ್ಣಯ್ಯ ಕಂದಾಯ ಪರಿವೀಕ್ಷರು (ರಾಜರಾಜೇಶ್ವರಿನಗರ) ರವರು ಹಾಜರಿದ್ದು ಸಂಬಂಧಪಟ್ಟ ಸಹ ಕಂದಾಯಾಧಿಕಾರಿ ಇವರು ಆಯುಕ್ತರವರ ಸಭೆಗೆ ಹೋಗಿರುವುದಾಗಿ ತಿಳಿಸಿರುತ್ತಾರೆ. ಮನವಿದಾರರು ಎಸ್.ಎ.ಎಸ್ ಸ್ಕೀಂ ಜಾರಿಗೆ ಬಂದಾಗಿನಿಂದ ಕ್ರಮ ಬದ್ಧವಾಗಿ ತೆರಿಗೆಯನ್ನು ಪಾವತಿಸಿಕೊಂಡು ಬರುತ್ತಿದ್ದು ಹಾಗೂ ಈ ಸಂಬಂಧ ಮೇಲ್ಮನವಿ ಸಲ್ಲಿಸಿದ್ದು ಇದಕ್ಕೆ ಅವಕಾಶ ನೀಡಲಾಗಿದೆ ಎಸ್.ಎ.ಎಸ್ ಪ್ರಕಾರ ತೆರಿಗೆಯನ್ನು ಪಾವತಿಸಿರುತ್ತೇನೆ. ಇದ್ದ ಮಿನಿಹಾಲ್‌ನ್ನು ಬಂದ್ ಮಾಡಿ ವಾಣಿಜ್ಯ ಉಪಯೋಗಕ್ಕೆ ಬದಲಾಯಿಸಿ ಕೊಂಡಿರುವುದಾಗಿ ಹಾಗೂ ನಾನು ತೆರಿಗೆಯನ್ನು ಪಾವತಿಸಲು ಹೋದಾಗ ಹಿಂದಿನ ವರ್ಷಗಳ ಬಾಕಿ ಇರುವ ತೆರಿಗೆಯನ್ನು ಪಾವತಿಸುವಂತೆ ತಿಳಿಸಿರುತ್ತಾರೆ. ಸಂಬಂಧಪಟ್ಟವರು ಕಟ್ಟಡದ ವಿಸ್ತೀರ್ಣವನ್ನು ತಪ್ಪಾಗಿ ಲೆಕ್ಕಾ ಮಾಡಲಾಗಿದೆ ಎಂಬುದಾಗಿ ತಿಳಿಸಿರುತ್ತಾರೆ. ಅದ್ದರಿಂದ ಸಂಬಂಧಪಟ್ಟ ಆಧಿಕಾರಿಗಳು ಹಾಗೂ ವಲಯ ಉಪ ಆಯುಕ್ತರವರೊಂದಿಗೆ ಮನವಿದಾರರ ಸಮಕ್ಷಮದಲ್ಲಿ ಜಂಟಿ ತಪಾಸಣೆ ಮಾಡಿ ಕಟ್ಟಡವನ್ನು ಅಳತೆ ಮಾಡಿ ಸರಿಯಾದ ವಿಸ್ತಿರ್ಣವನ್ನು ಮುಂದಿನ ವಿಚಾರಣೆ ವೇಳೆಗೆ ಮಂಡಿಸುವಂತೆ ಸೂಚಿಸಿ ಪ್ರಕರಣವನ್ನು ಮುಂದೂಡಲಾಗಿದೆ.

ವಿಷಯ:ಸಂಖ್ಯೆ:ಅಸ್ಥಾಸ/(ಮಾ)/25/2012-13 ಆಯುಕ್ತರು ರವರ ಟಿಪ್ಪಣಿ ಸಂಖ್ಯೆ:ಸಕಂಅ(ದ)(ಮಾ)ಪಿಆರ್.206/ 12-13 ದಿನಾಂಕ:30-1-2013ರ ರೀತ್ಯಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿನ ಮೊದಲನೇ ಮಹಡಿಯಲ್ಲಿರುವ ತರಕಾರಿ ಮಾರುಕಟ್ಟೆಯ ಮೆಜನೈನ್ ಫ್ಲೋರ್ ಮಳಿಗೆ ಸಂಖ್ಯೆ. 3-4 ನ್ನು ಟೆಂಡರ್ ಕರೆದು ಶ್ರೀಮತಿ. ಡಿ.ವಿದ್ಯಾ ರವರಿಗೆ 2008 ನೇ ಫೆಬ್ರವರಿ ಮಾಹೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಮೇರೆಗೆ ಷರತ್ತು ಮತ್ತು ನಿಬಂಧನೆಗಳನ್ವಯ ಹಂಚಿಕೆ ಮಾಡಲಾಗಿರುತ್ತದೆ. ಶ್ರೀಮತಿ. ಡಿ.ವಿದ್ಯಾ ರವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ತರಕಾರಿ ಮಾರುಕಟ್ಟೆಯ ಮೆಜನೈನ್ ಫ್ಲೋರ್‌ನಲ್ಲಿರುವ ಮಳಿಗೆ ಸಂಖ್ಯೆ. 3 ಮತ್ತು 4 ರ ಪರವಾನಗಿದಾರರು ಪರವಾನಗಿ ಶುಲ್ಕವನ್ನು ಕಡಿಮೆ ಮಾಡಿಕೊಡಬೇಕೆಂದು ಕೋರಿ ಅಧ್ಯಕ್ಷರು ಅಫೀಲು ಸ್ಥಾಯಿ ಸಮಿತಿಗೆ ದಿನಾಂಕ: 31-7-2012 ರಂದು ಮನವಿಯನ್ನು ಸಲ್ಲಿಸಿರುತ್ತಾರೆ.

ಮಾನ್ಯ ಅಧ್ಯಕ್ಷರು ಅಫೀಲುಗಳ ಸ್ಥಾಯಿ ಸಮಿತಿರವರ ಪತ್ರದ ಮೇರೆಗೆ ಪರಿಶೀಲಿಸಲಗಿ ಸದರಿ ಮಳಿಗೆಯನ್ನು ಟೆಂಡರ್ ಕರೆದು ಟೆಂಡರ್‌ನಲ್ಲಿ ಭಾಗವಹಿಸಿ ಶ್ರೀಮತಿ. ಡಿ.ವಿದ್ಯಾರವರು ಪರವಾನಗಿದಾರರಾಗಿರುತ್ತಾರೆ. ಪರವಾನಗಿ ಶುಲ್ಕ ರೂ. 10.950/- ಸೇವಾಶುಲ್ಕ ರೂ. 2190/- ಹಾಗೂ ಕೇಂದ್ರೀಯ ಸೇವಾಶುಲ್ಕ ರಊ. 1354/- ಒಟ್ಟು ಒಂದು ತಿಂಗಳ ಪರವಾನಗಿ ಶುಲ್ಕ ರೂ. 14,494/- ಗಳಾಗಿದ್ದು, ಸದರಿ ಮಳಿಗೆಯು ಪಾಲಿಕೆಯಿಂದ 2008 ನೇ ಫೆಬ್ರವರಿ ಮಾಹೆಯಲ್ಲಿ ಮಂಜೂರಾಗಿರುತ್ತದೆ. ಸದರಿ ಮಳಿಗೆ ಮಂಜೂರಾದ ದಿವಸದಿಂದ ಇದುವರೆವಿಗೂ ಅಂದರೆ 31-01-2011 ರವರೆಗೆ ರೂ. 4,61,431/- ಗಳನ್ನು ಬಾಕಿ ಉಳಿಸಿಕೊಂಡಿದ್ದು, ಇದುವರೆವಿಗೂ ಕೆ.ಎಂ.ಸಿ. ಕಾಯ್ದೆಯ ಸಿಕ್ಷನ್ 470&370(2) ನೋಟೀಸುಗಳನ್ನು ನೀಡಿದ್ದರೂ ಸಹ ಪರವಾನಗಿ ಶುಲ್ಕ ಪಾವತಿ ಮಾಡಿರುವುದಿಲ್ಲ. -2-

ಶ್ರೀಮತಿ. ಡಿ.ವಿದ್ಯಾ ರವರು ಪರವಾನಗಿ ಶುಲ್ಕವನ್ನು ಪಾವತಿಸದ ಕಾರಣ ದಿನಾಂಕ: 17-8-2011 ರಂದು ಬೀಗ ಮುದ್ರೆಯನ್ನು ಹಾಕುವಂತೆ ಮಾನ್ಯ ಆಯುಕ್ತರು ಆದೇಶಿಸಿದ್ದರ ಮೇರೆಗೆ ಮಳಿಗೆಗೆ ಬೀಗಮುದ್ರೆ ಹಾಕುವ ಹಿಂದಿನ ದಿವಸವೇ ಅಂದರೆ ದಿನಾಂಕ: 16-8-2011 ರಂದು ರೂ. 1,00,000/- ಗಳ ಡಿ.ಡಿ.ಯನ್ನು ಹಾಗೂ ಉಳಿದ ಮೊತ್ತ ರೂ. 4,12,000/- ಗಳಿಗೆ ಧನಾದೇಶವನ್ನು ನೀಡಿರುತ್ತಾರೆ. ಸದರಿ ರೂ. 4,12,000/- ಚೆಕ್ ಸಂಖ್ಯೆ.785025 ರನ್ನು ದಿನಾಂಕ 17-9-2011 ರಂದು ಬ್ಯಾಂಕಿಗೆ ಜಮಾ ಮಾಡಲಾಗಿದ್ದು, ಸದರಿಯವರ ಖಾತೆಯಲ್ಲಿ ಹಣದ ಕೊರತೆ ಇರುವ ಕಾರಣ ಚೆಕ್ ತಿರಸ್ಕೃತಗೊಂಡು ಹಿಂದಿರುಗಿರುತ್ತದೆ. ಈ ಮೇರೆಗೆ ಪುನಃ ಪರವಾನಗಿದಾರರಾದ ಶ್ರೀಮತಿ. ವಿದ್ಯಾರವರಿಗೆ ದಿನಾಂಕ: 21-9-2011 ರಂದು ತಿರಸ್ಕೃತಗೊಂಡಿರುವ ಚೆಕ್ಕಿನ ಮೊತ್ತವನ್ನು ಡಿಮ್ಯಾಂಡ್ ಡ್ರಾಫ್ಟ್ ಮುಖಾಂತರ ಕೂಡಲೇ ಈ ಕಛೇರಿಗೆ ಸಲ್ಲಿಸುವಂತೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಲಾಗಿರುತ್ತದೆ.

ಆದಾಗ್ಯೂ ಸದರಿ ಪರವಾನಗಿದಾರರು ತಿಳುವಳಿಕೆ ಪತ್ರಕ್ಕೆ ಸ್ಪಂದಿಸದೆ ಬೇಜವಾಬ್ದಾರಿತನದಿಂದ ಯಾವುದೇ ಉತ್ತರವನ್ನು ಸಹ ನೀಡದೆ ಹಾಗೂ ಬಾಕಿ ಪರವಾನಗಿ ಶುಲ್ಕವನ್ನು ಪಾಲಿಕೆಗೆ ಪಾವತಿಸದೇ ಲೋಪ ಎಸಗಿರುತ್ತಾರೆ. ಈ ಮಧ್ಯೆ ದಿನಾಂಕ: 29-9-2011 ರಂದು ರೂ. 50,000/- ಗಳಿಗೆ ಮಾತ್ರ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಇದರಿಂದ ಸದರಿಯವರು ಪಾಲಿಕೆಗೆ ಆರ್ಥಿಕ ನಷ್ಟವಾಗಲು ಕಾರಣರಾಗಿರುತ್ತಾರೆ. ಈ ಅಂಶಗಳನ್ನು ಅಫೀಲು ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಶ್ರೀಮತಿ. ಟಿ.ವಿದ್ಯಾ ರವರ ಮೇಲ್ಮನವಿಯನ್ನು ತಿರಸ್ಕರಿಸುವಂತೆ ಕೋರಿದೆ.

ಪ್ರಕರಣವನ್ನು ಕರೆಯಲಾಯಿತು ಅರ್ಜಿದಾರರ ಪರವಾಗಿ ಅಧಿಕಾರ ಪತ್ರದೊಂದಿಗೆ ಶ್ರೀ.ಸತೀಶ್ ಎಂಬುವವರು ಹಾಜರಾಗಿದ್ದು, ಹಾಗೂ ಶ್ರೀ.ಶಾಂತೇಶ್ ವ್ಯವಸ್ಥಾಪಕರು ಹಾಜರಿದ್ದು ಸಂಬಂಧಪಟ್ಟ ಸಹ ಕಂದಾಯಾಧಿಕಾರಿಯವರು ಕೆಲಸದ ಮೇಲೆ ಲೋಕಾಯುಕ್ತ ಕಛೇರಿಗೆ ಹೋಗಿರುವುದರಿಂದ ವಿಚಾರಣೆಗೆ ಬರಲು ಸಾಧ್ಯವಾಗಿರುವುದಿಲ್ಲ ಎಂಬುದಾಗಿ ತಿಳಿಸಿದರು .ಮಳಿಗೆ ಬಾಡಿಗೆಯನ್ನು ಹೆಚ್ಚುವರಿ ಮಾಡಿದ್ದು ಈ ಮಳಿಗೆಯನ್ನು ಟೆಂಡರ್ ಮುಖಾಂತರ ಅರ್ಜಿದಾರರ ಪರವಾಗಿ ಹಂಚಿಕೆಯಾಗಿರುತ್ತದೆ.

ಅರ್ಜಿದಾರರು ಬಾಡಿಗೆಯನ್ನು ಕಡಿಮೆ ಮಾಡಿಕೊಡುವಂತೆ ಮನವಿ ಮಾಡಿದ್ದು, ಅರ್ಜಿದಾರರಿಗೆ ಇರುವ ಬಾಕಿಯನ್ನು ಚುತ್ತಾ ಮಾಡಲು ನಿರ್ದೇಶಿಸಿ ಪ್ರಕರಣವನ್ನು ಮುಂದೂಡಿದೆ.

ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2012-13: ಅಪರ ಆಯುಕ್ತರು(ದಕ್ಷಿಣ)ರವರ ಟಿಪ್ಪಣಿ ದಿನಾಂಕ:31-10-2012ರ ರೀತ್ಯಾ ಸ್ವತ್ತಿನ ಸಂಖ್ಯೆ:12 ವಯ್ಯಪುರಿ ಲೇನ್,ಆರ್ಮುಗಂ ಮೊದಲಿಯಾರ್ ಸ್ಟ್ರೀಟ್,ಕಲಾಸಿಪಾಳ್ಯಂ, ಬೆಂಗಳೂರು-02. ವಾರ್ಡ್-119ರ ಖಾತೆಯು ಆರ್. ಪದ್ಮನಾಭನ್‌ರವರ ಹೆಸರಿನಲ್ಲಿ ದಾಖಲಾಗಿದ್ದು, ಸ್ವತ್ತಿನ ಒಟ್ಟು ಅಳತೆ 1200 ಚದರಡಿ ವಾರ್ಷಿಕ ಮೌಲ್ಯ ರೂ.27216 ವಸತಿ,34560 ವಸತಿಯೇತರ ಮೇಲೆ ದಾಖಲಿಸಲ್ಪಟ್ಟಿದೆ,ಖಾತೆದಾರರು ಸ್ವತ್ತಿನಲ್ಲಿ ನೆಲಮಾಳಿಗೆ ಪಾರ್ಕಿಂಗ್ 1000 ಚದರಡಿ ಹಾಗೂ 1ನೇ,2ನೇ ಮತ್ತು 3ನೇ ಅಂತಸ್ತು ಒಟ್ಟು 3800 ಚದರಡಿಗಳ ಕಟ್ಟಡವಿದ್ದು ಸ್ವತ್ತಿಗೆ ಎಸ್.ಎ.ಎಸ್.ದರದಂತೆ ಸಾಮಾನ್ಯ ಪರಿಷ್ಕರಣೆ ಅಡಿಯಲ್ಲಿ ವಾರ್ಷಿಕ ಮೌಲ್ಯವನ್ನು 32704/- ವಸತಿಗಳಿಗೆ ಮತ್ತು 36500 ವಸತಿಯೇತರಗಳಿಗೆ ದಿನಾಂಕ:01-04-2008ರಿಂದ ಅನ್ವಯವಾಗುವಂತೆ ಪರಿಷ್ಕರಿಸಲಾಗಿರುತ್ತದೆ. ಕಂದಾಯ ನಿಗದಿ ಬಗ್ಗೆ ಪ್ರಥಮ ಅಪೀಲು ಅಧಿಕಾರಿಯವರಿಗೆ ಅಪೀಲು ಮನವಿ ಸಲ್ಲಿಸಿದ್ದರ ಮೇರೆಗೆ ಪ್ರಥಮ ಅಪೀಲು ಅಧಿಕಾರಿಯವರು ಸ್ವತ್ತಿನ ವಾರ್ಷಿಕ ಮೌಲ್ಯವನ್ನು ವಸತಿ ರೂ.32704/- ಗಳಿಂದ ರೂ.31360/-ಗಳಿಗೆ ಮತ್ತು ವಸತಿಯೇತರ ವಾರ್ಷಿಕ ಮೌಲ್ಯ ರೂ.36500/-ಗಳಿಂದ ರೂ.35000/- ಗಳಿಗೆ ನಿಗಧಿ ಪಡಿಸಿ ದಿನಾಂಕ:01-04-2008ರಿಂದ ಅನ್ವಯವಾಗುವಂತೆ ಕಡಿಮೆ ಮಾಡಿದ್ದು ವಿಶೇಷ ಸೂಚನಾಪತ್ರ ಜಾರಿಮಾಡಲಾಗಿರುತ್ತದೆ. ಪ್ರಥಮ ಅಪೀಲು ಅಧಿಕಾರಿಯವರ ಆದೇಶದ ವಿಶೇಷ ಸೂಚನಾಪತ್ರ ಸ್ವೀಕರಿಸಿದ ಖಾತೆದಾರರು ಮನವಿ ಸಲ್ಲಿಸಿ ಸದರಿ ಕಟ್ಟಡವು ಸುಮಾರಿ 29 ವರ್ಷ ಹಳೆಯದ್ದಾಗಿದ್ದು ಕಟ್ಟಡದ ಅಳತೆ ಹಾಗೂ ಕಟ್ಟಡದ ವಯಸ್ಸು ಹಾಗೂ ಉಪಯೋಗಕ್ಕೆತಕ್ಕಂತೆ ಕಂದಾಯ ಕಡಿಮೆ ಮಾಡಲು ಕೋರಿರುತ್ತಾರೆ. ಅದುದರಿಂದ ಈ ಬಗ್ಗೆ ಸಮಿತಿಯ ಮುಂದಿನ ತೀರ್ಮಾನಕ್ಕಾಗಿ ಕಡತವನ್ನು ಟಿಪ್ಪಣಿಯೊಂದಿಗೆ ಮಂಡಿಸಲಾಗಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಗೂ ಶ್ರೀ. ಮಾದೇಗೌಡ ಕಂದಾಯ ಪರಿವೀಕ್ಷಕರು (ಕೆಂಪೇಗೌಡನಗರ) ಹಾಜರಿದ್ದು ಸಹ ಕಂದಾಯಾಧಿಕಾರಿ ರಜೆಯ ಮೇಲೆ ಇರುವುದರಿಂದ ಕಾಲಾವಕಾಶ ಕೋರಿದ್ದರ ಮೇರೆಗೆ ಪ್ರಕರಣವನ್ನು ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ.

ವಿಷಯ:ಸಂಖ್ಯೆ:ಅಸ್ಥಾಸ/(ಜಾ)/34/2011-12 ಮತ್ತು **ಅಸ್ಥಾಸ/(ಜಾ)/27/2012-13** ಆಯುಕ್ತರು ರವರ ಟಿಪ್ಪಣಿ ಸಂಖ್ಯೆ:ಅ.ಅ.(ಜಾ) ಪಿಆರ್/83/05-06 ದಿನಾಂಕ; 14-02-2013ರ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಾಹೀರಾತು ವಿಭಾಗದಲ್ಲಿ ಮೆ॥ ಜೈ ಜವಾನ್ ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ಪೈಲೇಟ್ ಯೋಜನೆ ಅಡಿಯಲ್ಲಿ ಪಾಲಿಕೆಯ ವಿವಿಧ 04 ಸ್ಥಳಗಳಲ್ಲಿ ಅಂದರೆ 1) ಬಾಷ್ಯಂ ವೃತ್ತ 2) ಡಿಸೋಜ ವೃತ್ತ 3) ರಾಜ್ ಭವನ್ ರಸ್ತೆ ಚಾಲುಕ್ಯ ಹೋಟೆಲ್ ಜಂಕ್ಷನ್ 4) ಸ್ಯಾಂಕಿ ರಸ್ತೆ ಬಿ.ಡಿ.ಎ. ಹತ್ತಿರದ ಸ್ಥಳಗಳಲ್ಲಿ ನೀರಿನ ಕಾರಂಜಿಗಳನ್ನು ಅಳವಡಿಸಿ ವಾಣಿಜ್ಯ ಜಾಹೀರಾತುಪಡಿಸಲು ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳು ಮಾಡಿರುವ ನಿರ್ಣಯದ ಆಧಾರದ ಮೇಲೆ ದಿನಾಂಕ:17.02.2006 ರಿಂದ 03 ವರ್ಷಗಳ ಅವಧಿಗೆ ನಿಗಧಿತ ನೆಲಬಾಡಿಗೆ, ಪ್ರತಿ ನೀರಿನ ಕಾರಂಜಿಗೆ ಪ್ರತಿ ತಿಂಗಳಿಗೆ ರೂ.5,000/- ಗಳನ್ನು ಹಾಗೂ ಭದ್ರತಾ ಠೇವಣಿ ರೂ.1,00,000/-ಗಳನ್ನು ಹಾಗೂ ಅನ್ವಯಿಸುವ ಜಾಹೀರಾತು ತೆರಿಗೆ ಪಾವತಿಸುವ ಷರತ್ತಿನೊಂದಿಗೆ 24x6 ಅಡಿ ಅಳತೆಯ ಫಲಕಗಳನ್ನು ಅಳವಡಿಸಿ ಸುಂದರೀಕರಣ ಮಾಡಲು ಅನುಮೋದನೆ ನೀಡಲಾಗಿತ್ತು.

ತದ ನಂತರ ಸದರಿ ಸಂಸ್ಥೆಯವರು ಮಾನ್ಯ ಆಡಳಿತಗಾರರಿಗೆ ಮನವಿ ಪತ್ರವನ್ನು ಸಲ್ಲಿಸಿ ಹಾಲಿ ಇರುವ 24ಥ6 ಅಡಿ ಅಳತೆಗೆ ಬದಲಾಗಿ 24x12 ಅಡಿ ಅಳತೆಗೆ ಹೆಚ್ಚಿಸಲು ಹಾಗೂ ಹಾಲಿ ಇರುವ 03 ವರ್ಷಗಳ ಅವಧಿಯನ್ನು 05 ವರ್ಷಗಳ ಅವಧಿಗೆ ವಿಸ್ತರಿಸಲು ಕೋರಿರುವುದನ್ನು ಪರಿಗಣಿಸಿ, ಮಾನ್ಯ ಆಡಳಿತಗಾರರ ದಿನಾಂಕ:13.11.2007ರ ನಡವಳಿಗಳು ವಿಷಯ ಸಂಖ್ಯೆ: 243/2007-2008ರ ನಿರ್ಣಯದಲ್ಲಿ ಜಾಹೀರಾತು ಅಳತೆ 24x6 ಅಡಿಯಿಂದ 24x12 ಅಡಿ ಅಳತೆಗೆ ಹೆಚ್ಚಿಸಿ ಹಾಗೂ 03 ವರ್ಷಗಳ ಅನುಮತಿ ಅವಧಿಯನ್ನು 05 ವರ್ಷಗಳ ಅವಧಿಗೆ ವಿಸ್ತರಿಸಲು ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ಆದೇಶದಂತೆ ಅನುಮತಿಯ ಅವಧಿಯನ್ನು ವಿಸ್ತರಿಸಿ ಅನುಮತಿ ನೀಡಲಾಗಿತ್ತು. ಈ ಮಧ್ಯೆ ಮಾನ್ಯ ಆಡಳಿತಗಾರರ ದಿನಾಂಕ:12.01.2010ರ ವಿಷಯ ಸಂಖ್ಯೆ:538/09-10ರ ನಿರ್ಣಯದಲ್ಲಿ ಸದರಿ ಸಂಸ್ಥೆಯವರಿಗೆ ಹಾಲಿ ಅನುಮತಿ ನೀಡಿರುವ ರಾಜ್ ಭವನ್ ರಸ್ತೆಯ ಜಾಹೀರಾತು ಬೈಲಾ-2006ರ ಪ್ರಕಾರ 'ಎ' ವಲಯಕ್ಕೆ ಬರುವುದರಿಂದ ಈ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಅವರ ಸ್ವಂತ ಖರ್ಚಿನ ಮೇಲೆ ಬದಲಾಯಿಸಿಕೊಳ್ಳುವಂತೆ ಹಾಗೂ ದಿನಾಂಕ:13.11.2007ರ ನಿರ್ಣಯದಲ್ಲಿ ತೀರ್ಮಾನಿಸಿರುವಂತೆ ದಿನಾಂಕ:16.02.2011 ರವರೆಗೆ ಅನುಮತಿಯನ್ನು ನೀಡಲು ತೀರ್ಮಾನಿಸಲಾಗಿತ್ತು.

ಸದರಿ ಸಂಸ್ಥೆಯವರು ದಿನಾಂಕ:21.03.2011ರಂದು ಮನವಿ ಸಲ್ಲಿಸಿ ನಾನೊಬ್ಬ ಮಾಜಿ ಸೈನಿಕನಾಗಿದ್ದು 20 ವರ್ಷ ರಕ್ಷಣಾ ಪಡೆಯಲ್ಲಿ ಸೇವೆ ಸಲ್ಲಿಸಿ ಈಗ ನಿವೃತ್ತಿ ಹೊಂದಿದ್ದು ಯಾವುದೇ ಕೆಲಸ ಇಲ್ಲದೇ ಇರುವುದರಿಂದ ಜಾಹೀರಾತು ಪರವಾನಗಿ ಪಡೆದು ನಗರ ಪಾಲಿಕೆಯಿಂದ ನೀರಿನ ಕಾರಂಜಿಯನ್ನು ಅಳವಡಿಸಿ ಅದರ ಮೇಲೆ ಜಾಹೀರಾತು ಪ್ರದರ್ಶಿಸಲು ಅನುಮತಿಯನ್ನು ಪಡೆದಿದ್ದು, ಪ್ರಸ್ತುತ ನೀರಿನ ಕಾರಂಜಿಯನ್ನು ದಿನಾಂಕ:16.02.2011ರಿಂದ ಮುಂದಿನ 05 ವರ್ಷಗಳ ಅವಧಿಗೆ ಹಾಗೂ 24ಥ12 ಅಡಿ ಅಳತೆಯಿಂದ 15x30 ಅಡಿ ಅಳತೆಗೆ ಹೆಚ್ಚಿಸಿಕೊಳ್ಳಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಈ ಬಗ್ಗೆ ಸ್ಥಳ ಪರಿಶೀಲಿಸಲಾಗಿದ್ದು, ಅನುಮತಿ ನೀಡಿರುವ ರಾಜ್ ಭವನ್ ರಸ್ತೆಯ ಜಾಹೀರಾತು ಬೈಲಾ-2006ರ ಪ್ರಕಾರ 'ಎ' ವಲಯಕ್ಕೆ ಬರುವುದರಿಂದ ಈ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಅವರ ಸ್ವಂತ ಖರ್ಚಿನ ಮೇಲೆ ಬದಲಾಯಿಸಿಕೊಳ್ಳುವಂತೆ ದಿನಾಂಕ:12.01.2010ರ ನಿರ್ಣಯದಲ್ಲಿ ತೀರ್ಮಾನಿಸಲಾಗಿತ್ತು. ಈ ಆದೇಶದಂತೆ ಬದಲಿ ಸ್ಥಳದಲ್ಲಿ ಅಳವಡಿಸಿಕೊಳ್ಳದೆ ಉಲ್ಲಂಘನೆ ಮಾಡಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿತ್ತು.

ದಿನಾಂಕ:19.07.2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ನಯೋಅಸ್ಥಾಸ/32/11-12 ನಿರ್ಣಯದಲ್ಲಿ ಮೆ॥ ಜೈ ಜವಾನ್ ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ಪೈಲೆಟ್ ಯೋಜನೆಯಡಿಯಲ್ಲಿ ನೀಡಲಾಗಿರುವ ಅನುಮತಿಯನ್ನು ನವೀಕರಿಸಲು ಕಳುಹಿಸಲಾಗಿರುವ ಪ್ರಸ್ತಾವನೆಯನ್ನು ತಿರಸ್ಕರಿಸುತ್ತಾ, ಈ ಮುಂದೆ ಟೆಂಡರ್-ಕಂ-ಹರಾಜು ಮೂಲಕವೇ ನಿರ್ವಹಿಸುವಂತೆ ತೀರ್ಮಾನಿಸಲಾಗಿರುತ್ತದೆ. ಈ ನಿರ್ಣಯದಂತೆ ಅರ್ಜಿದಾರರಿಗೆ ನಿಮ್ಮ ಮನವಿಯನ್ನು ತಿರಸ್ಕರಿಸುತ್ತಾ, ಅವಧಿ ಮುಗಿದ ನಂತರ ಜಾಹೀರಾತು

ಪ್ರದರ್ಶಿಸುತ್ತಿರುವ ಅವಧಿಗೆ ದಿನಾಂಕ:17.02.2011 ರಿಂದ 20.08.2011ರವರೆಗೂ ನೆಲಬಾಡಿಗೆ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆ ಸೇರಿ ಒಟ್ಟು ರೂ.2,08,998/-ಗಳನ್ನು ಪಾವತಿಸುವಂತೆ ಹಿಂಬರಹವನ್ನು ನೀಡಲಾಗಿರುತ್ತದೆ. ಅರ್ಜಿದಾರರು ಈ ಹಿಂಬರಹದ ವಿರುದ್ಧ ನಗರ ಪಾಲಿಕೆಯ ಅಫೀಲುಗಳ ಸ್ಥಾಯಿ ಸಮಿತಿಯಲ್ಲಿ ಮೇಲ್ಮನವಿ ಸಲ್ಲಿಸಿರುವ ಮೇರೆಗೆ ವಿವರವಾದ ಟಿಪ್ಪಣಿಯೊಂದಿಗೆ ಅಫೀಲುಗಳ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿತ್ತು.

ಅಪೀಲು ಸ್ಥಾಯಿ ಸಮಿತಿಯ ದಿನಾಂಕ:27.01.2012ರ ನಿರ್ಣಯದಲ್ಲಿ ಮೇಲ್ಮನವಿದಾರರು ನಿವೃತ್ತ ಮಾಜಿ ಸೈನಿಕರಾಗಿದ್ದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಾಗೂ ಸರ್ಕಾರದ ಅಧೀನ ಸಂಸ್ಥೆಗಳು ಮಾಜಿ ಸೈನಿಕರಿಗೆ ಹಲವಾರು ವಿಶೇಷ ಯೋಜನೆಗಳು ಹಾಗೂ ಕೆಲವೊಂದು ಯೋಜನೆಗಳಲ್ಲಿ ರಿಯಾಯಿತಿ ನೀಡಿ ಸ್ವಂತ ಉದ್ಯೋಗ ಕಲ್ಪಿಸಿಕೊಳ್ಳಲು ನೆರವು ನೀಡುತ್ತಿರುವುದು ತಿಳಿದ ವಿಷಯವಾಗಿರುತ್ತದೆ. ಅಲ್ಲದೆ ಮೇಲ್ಮನವಿದಾರರು ಇದುವರೆವಿಗೂ ಸಮರ್ಪಕವಾಗಿ ಜಾಹೀರಾತು ತೆರಿಗೆಯನ್ನು ಪಾವತಿಸಿರುವುದಲ್ಲದೆ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:18.10.2011ರ ನಿರ್ಣಯದಲ್ಲಿ ಸದರಿ ಪ್ರದೇಶದಲ್ಲಿ ಪ್ರದರ್ಶಿಸಿರುವ ಜಾಹೀರಾತು ಫಲಕಗಳನ್ನು ಟೆಂಡರ್ ಇಲ್ಲದೆ ಮುಂದುವರೆಸುವಂತೆ ನಿರ್ಣಯಿಸಿರುವುದು ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳಲ್ಲಿ ಕಂಡು ಬರುತ್ತದೆ ಹಾಗೂ ರಾಜ್‌ಭವನ್ ರಸ್ತೆಯಲ್ಲಿರುವ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ಥಳಾಂತರಿಸಿಕೊಳ್ಳುವುದಾಗಿ ಮೇಲ್ಮನವಿದಾರರು ಒಪ್ಪಿಕೊಂಡಿರುತ್ತಾರೆ. ಆದುದರಿಂದ ನೀರಿನ ಕಾರಂಜಿಗಳನ್ನು ಅಳವಡಿಸಿ ಅದರ ಮೇಲೆ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಈಗಾಗಲೇ ನಿಗದಿಪಡಿಸಿರುವ ನೆಲ ಬಾಡಿಗೆಯ ಆಧಾರದ ಮೇಲೆಯೇ ಮುಂದೆ ಹೊಸ ಜಾಹೀರಾತು ಬೈಲಾ ನೀತಿಗೆ ಬದ್ಧರಾಗುವ ಷರತ್ತಿಗೊಳಪಡಿಸಿ ದಿನಾಂಕ: 27.01.2011ರಿಂದ ಮುಂದಿನ ಮೂರು ವರ್ಷಗಳ ಅವಧಿಗೆ ಮುಂದುವರೆಸುವುದೆಂದು ಸಮಿತಿಯು ತೀರ್ಮಾನಿಸಲಾಗಿರುತ್ತದೆ. ಅವಧಿ ಮುಗಿದ ಮೇಲೆ ಮುಂದಿನ ವರ್ಷದ ಅವಧಿಗೆ ಅನುಮತಿ ನೀಡಬೇಕಾದರೆ ಕರ್ನಾಟಕ ಪಾರದರ್ಶಕ ಕಾಯ್ದೆ ಅನುಸಾರ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು, ಟೆಂಡರ್‌ನಲ್ಲಿ ಹೆಚ್ಚಿಗೆ ಬಿಡ್ ನಮೂದಿಸಿರುವ ಸಂಸ್ಥೆಗೆ ಅನುಮತಿ ನೀಡಬೇಕಾಗಿರುತ್ತದೆ. ಆದ್ದರಿಂದ, ಮೆ॥ ಜೈ ಜವಾನ್ ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ಮುಂದಿನ 3 ವರ್ಷಗಳ ಅವಧಿಗೆ ನವೀಕರಿಸಲು ತೀರ್ಮಾನಿಸಿರುವ ಅಫೀಲುಗಳ ಸ್ಥಾಯಿ ಸಮಿತಿಯ ದಿನಾಂಕ:27.01.2012ರ ನಿರ್ಣಯವನ್ನು ಕೆ.ಎಂ.ಸಿ. ಕಾಯ್ದೆ 1976ರ ಕಲಂ 98ರಂತೆ ರದ್ದುಪಡಿಸುವಂತೆ ಕೋರಲಾಗಿತ್ತು.

ಈ ಸಂಬಂಧ ಸರ್ಕಾರದ ಪತ್ರದ ಸಂ: ನಅಇ 207 ಎಂಎನ್‌ಯು 2012 ದಿನಾಂಕ:23.07.2012 ಮತ್ತು 19.11.2012 ರ ಪತ್ರದಲ್ಲಿ ಅಪೀಲು ಸ್ಥಾಯಿ ಸಮಿತಿಯ ದಿನಾಂಕ:27.01.2012ರಂದು ತೆಗೆದುಕೊಂಡಿರುವ ನಿರ್ಣಯವು ಕೆ.ಟಿ.ಪಿ.ಪಿ. ನಿಯಮಗಳ ಉಲ್ಲಂಘನೆಯಾಗಿರುವುದರಿಂದ ಪಾಲಿಕೆಯ ಆರ್ಥಿಕ ಹಿತಾಸಕ್ತಿಗೆ ಧಕ್ಕೆ ಉಂಟಾಗಿರುವುದರಿಂದ ಈ ನಿರ್ಣಯವನ್ನು ಏಕೆ ರದ್ದುಗೊಳಿಸಬಾರದು? ಎಂಬುದಕ್ಕೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ-1976 ಕಲಂ 98 (2) ರನ್ವಯ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ್ದು, ಈ ನೋಟೀಸ್‌ಗೆ ಸಮಿತಿಯ ಹೇಳಿಕೆ/ಸಮಜಾಯಿಷಿಗಳೇನಾದರೂ ಇದ್ದಲ್ಲಿ ಲಿಖಿತವಾಗಿ ವರದಿ ನೀಡುವಂತೆ ಕೋರಿರುವ ಮೇರೆಗೆ ಹೇಳಿಕೆ/ಸಮಜಾಯಿಷಿ ನೀಡುವ ಬಗ್ಗೆ ಅಪೀಲು ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದೆ.

<u>ನಿರ್ಣಯ:-</u> ಈ ಪ್ರಕರಣ ಕುರಿತಂತೆ ದಿನಾಂಕ: 27-01-2012ರ ಅಪೀಲು ಸ್ಥಾಯಿ ಸಮಿತಿಯ ನಿರ್ಣಯದ ರೀತ್ಯಾ ಮೇಲ್ಮನವಿದಾರರು ತಮ್ಮ ಮನವಿಯಲ್ಲಿ ಪಾಲಿಕೆಗೆ ಬಾಕಿ ಇದ್ದಂತಹ ಜಾಹಿರಾತು ತೆರಿಗೆಯನ್ನು ಪಾವತಿಸಿರುವುದಾಗಿ ಲಿಖಿತ ಮೂಲಕ ತಿಳಿಸಿದ್ದು ಹಾಗೂ ಇಂತಹುದೇ ಮತ್ತೊಂದು ಪ್ರಕರಣದಲ್ಲಿ ದಿನಾಂಕ: 18-10-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ತನ್ನ ನಿರ್ಣಯದಲ್ಲಿ ಕೆಲವೊಂದು ಜಾಹೀರಾತುದಾರರುಗಳು ಪ್ರದರ್ಶಿಸಿರುವ ಜಾಹಿರಾತು ಫಲಕಗಳನ್ನು ಮುಂದುವರೆಸಲು ನಿರ್ಣಯಿಸಿರುವ ಪ್ರಸಂಗಗಳನ್ನು ಅವಲೋಕಿಸಿ, ಪ್ರಸ್ತಾಪಿತ ಪ್ರಕರಣದಲ್ಲಿ ಸಂಬಂಧಪಟ್ಟ ಪ್ರತಿವಾದಿಗಳು ವಿಚಾರಣೆಗೆ ಹಾಜರಾಗದೆ ತಮ್ಮ ಪ್ರತಿವಾದಗಳನ್ನು ಮಂಡಿಸದಿಲ್ಲದಿರುವುದನ್ನು ಗಮನಿಸಿ,ಅವರುಗಳ ಹೇಳಿಕೆ ಏನೂ ಇರುವುದಿಲ್ಲವೆಂಬ ಅಂಶಗಳನ್ನು ಮನಗಂಡಿದ್ದು,ಮೇಲ್ಮನವಿದಾರರು ಮಾಜಿ ಸೈನಿಕರಾಗಿದ್ದು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸರ್ಕಾರದ ಅಂಗ ಸಂಸ್ಥೆಗಳು ಮಾಜಿ ಸೈನಿಕರಿಗೆ ಹಲವಾರು ವಿಶೇಷ ಯೋಜನೆಗಳನ್ನು ಹಾಗೂ ಕೆಲವೊಂದು ಯೋಜನೆಗಳಲ್ಲಿ ರಿಯಾಯಿತಿ ನೀಡಿ ಸ್ವಂತ ಉದ್ಯೋಗ ಕಲ್ಪಿಸಿಕೊಳ್ಳಲು ನೆರವು ನೀಡುತ್ತಿರುವ ಅಂಶಗಳನ್ನು ಸಹ ಕೂಲಂಕುಷವಾಗಿ

ಗಮನಿಸಿರುವುದೇ ಅಲ್ಲದೆ, ಈ ಪ್ರಕರಣದಲ್ಲಿ ಮೇಲ್ಮನವಿದಾರರು ತಹಲ್ ವರೆವಿಗೂ ಪೂರ್ಣವಾಗಿ ಜಾಹಿರಾತು

ತೆರಿಗೆಯನ್ನು ಪಾವತಿಸಿಕೊಂಡು ಬರುತ್ತಿರುವ ಹಿನ್ನೆಲೆಯಲ್ಲಿ ಮತ್ತು ದಿನಾಂಕ:18-10-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯದಲ್ಲಿ ಸದರಿ ಪ್ರದೇಶದಲ್ಲಿ ಪ್ರದರ್ಶಿಸಿರುವ ಜಾಹಿರಾತು ಫಲಕಗಳನ್ನು ಟೆಂಡರ್ ಇಲ್ಲದೆ ಮುಂದುವರೆಸುವಂತೆ ನಿರ್ಣಯಿಸಿರುವ ಕ್ರಮವನ್ನು ಮೇಲ್ಮನವಿದಾರರು ತಮ್ಮ ಮನವಿಯಲ್ಲಿ ಪ್ರಸ್ಥಾಪಿಸಿರುವುದು ಕಂಡು ಬಂದಿರುತ್ತದೆ.

ಮುಂದುವರೆದಂತೆ, ಮೇಲ್ಮನವಿದಾರರು ರಾಜಭವನ ರಸ್ತೆಯಲ್ಲಿರುವ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ಥಳಾಂತರಿಸಿಕೊಳ್ಳುವುದಾಗಿ ಒಪ್ಪಿಕೊಂಡಿರುವುದರಿಂದ ಈ ಪ್ರಸ್ತಾವನೆಗೆ ಹೊಸ ಜಾಹಿರಾತು ಬೈಲಾ ನೀತಿಗೆ ಬದ್ಧರಾಗುವ ಷರತ್ತಿಗೊಳಪಡಿಸಿ ದಿನಾಂಕ:27-01-2011ರಿಂದ ಅನ್ವಯವಾಗುವಂತೆ ಕೈಗೊಂಡಿರುವ ನಿರ್ಣಯವು ಸಮಂಜಸವೆಂದು ಅಭಿಪ್ರಾಯಿಸಿದೆ. ಈ ನಿರ್ಣಯವು ಮಾನವೀಯತೆ ದೃಷ್ಟಿಯಿಂದ ಕೈಗೊಳ್ಳಲಾಗಿದೆ ಎಂಬುದನ್ನು ಸಹ ಮನದಟ್ಟು ಮಾಡಿಕೊಳ್ಳಬಹುದಾಗಿದೆ.

ಸಮಿತಿಯು ಕೈಗೊಂಡಿರುವ ನಿರ್ಣಯ ಕುರಿತಂತೆ ಸರ್ಕಾರವು ದಿನಾಂಕ: 23-07-2012ರಂದು ಹೊರಡಿಸಿರುವ ಕಾರಣ ಕೇಳಿ ನೋಟಿಸ್ ಅನ್ನು ಕೈಬಿಡುವಂತೆ ಸರ್ಕಾರವನ್ನು ಕೋರಲು ಆಯುಕ್ತರಿಗೆ ಸೂಚಿಸಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

(ಪುಟ್ಟಮ್ಮ)
ಅಧ್ಯಕ್ಷರು
ಅಪೀಲುಗಳ ಸ್ಥಾಯಿ ಸಮಿತಿ